# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

**ದಿನಾಂಕ: 09–08–2023** ರಂದು ಬೆಳಿಗ್ಗೆ **11:30** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ **29ನೇ** ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ನಡಾವಳಿ.

| | |
|---|---|
| **ಉಪಸ್ಥಿತ ಶೈಕ್ಷಣಿಕ ಮಂಡಳಿ ಸದಸ್ಯರು** | |
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. |
| **ಪ್ರೊ. ಎನ್. ಲಕ್ಷ್ಮಿ**<br>ಡೀನ್ (ಶೈಕ್ಷಣಿಕ),<br>ಮತ್ತು ಸ್ಕೂಲ್ ನಿರ್ದೇಶಕರು, ಶಿಕ್ಷಣ ನಿಕಾಯ,<br>ಕರಾಮುವಿ, ಮೈಸೂರು. | **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. |
| **ಅನುಪಸ್ಥಿತರು** | |
| **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ,<br>ಮೈಸೂರು | **ಪ್ರೊ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು)<br>ಕರಾಮುವಿ, ಮೈಸೂರು. |
| **ಸ್ಕೂಲ್ ನಿರ್ದೇಶಕರು** | |
| **ಪ್ರೊ. ಕಾಂಬ್ಳೆ ಅಶೋಕ್** | ವಿಜ್ಞಾನ ನಿಕಾಯ |
| **ಪ್ರೊ. ಸಿ. ಮಹದೇವಮೂರ್ತಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ರಮಾನಂದ ಎಂ. ಎಸ್** | ವಾಣಿಜ್ಯ ನಿಕಾಯ |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್. ಎಸ್**<br>ನಿರ್ದೇಶಕರು, CIQA, ಕರಾಮುವಿ, ಮೈಸೂರು. | |
| **ಅನುಪಸ್ಥಿತರು** | |
| **ಡಾ. ಶಂಕರನಾರಣಪ್ಪ** | ಸಮಾಜ ವಿಜ್ಞಾನ ನಿಕಾಯ |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಶಾಸನಬದ್ಧ ಅಧಿಕಾರಿಗಳು, ಮಾನ್ಯ ಸದಸ್ಯರುಗಳನ್ನು ಹಾಗೂ ಸ್ಕೂಲ್ ನಿರ್ದೇಶಕರುಗಳನ್ನು 29ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಸ್ವಾಗತಿಸಿ ಕಾರ್ಯಸೂಚಿಯಂತೆ ವಿಷಯವನ್ನು ಸಭೆಗೆ ಮಂಡಿಸಿದರು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 29.01**

**ವಿಷಯ:** ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯಲ್ಲಿನ 10 + 2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳ ಅಧೀನದಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡುವ ಕುರಿತು ದಿನಾಂಕ: 21.07.2023ರ ರಂದು ಸದರಿ ಸಂಸ್ಥೆಯವರು ನೀಡಿರುವ ಪತ್ರದ ಬಗೆಗೆ.

**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿವಿ ನಿಲಯಗಳು –2) ರವರ ಪತ್ರ ಸಂಖ್ಯೆ: ಇ–ಕ್ರಮಾಂಕ:ಇಡಿ/248/ಯುಆರ್‌ಸಿ/2021 ದಿನಾಂಕ: 28.11.2022

*****

ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ಇವರು ದಿನಾಂಕ: 21.07.2023ರ ರಂದು ಮಾನ್ಯ ಕುಲಪತಿಗಳಿಗೆ ನೀಡಿರುವ ಪತ್ರದಲ್ಲಿ ತಮ್ಮ ಸಂಸ್ಥೆಯು ನಡೆಸುತ್ತಿರುವ ಮುಕ್ತ ಶಾಲೆಯಲ್ಲಿನ 10 + 2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳ ಅಧೀನದಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ಕಲ್ಪಿಸಿಕೊಡುವಂತೆ ಉಲ್ಲೇಖಿತ ಸರ್ಕಾರದ ಅಧೀನ ಕಾರ್ಯದರ್ಶಿಗಳ ಪತ್ರದಲ್ಲಿ ತಿಳಿಸಲಾಗಿರುವಂತೆ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಮುಕ್ತ ಶಾಲೆಯಲ್ಲಿನ 10 + 2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶಾತಿ ಕಲ್ಪಿಸಿಕೊಡುವಂತೆ ಕೋರಿರುತ್ತಾರೆ (ಅನುಬಂಧ–1).

ಈ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರ ಮನವಿಯ ಬಗ್ಗೆ ಚರ್ಚೆ ಹಾಗೂ ನಿರ್ಣಯಕೈಗೊಳ್ಳುವ ಸಂಬಂಧವಾಗಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

**ಚರ್ಚೆ:**

ಮಾನ್ಯ ಕುಲಪತಿಗಳು ಮಾತನಾಡಿ ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ರವರು ನೀಡಿರುವ ಮನವಿ ಪತ್ರ ಹಾಗೂ ಈ ಸಂಬಂಧ ಲಗತ್ತಿಸಿರುವ ಪತ್ರಗಳನ್ನು ವಿವರವಾಗಿ ಸಭೆಯ ಮಾನ್ಯ ಸದಸ್ಯರುಗಳು ಪರಿಶೀಲಿಸಿ ಅಗತ್ಯ ತೀರ್ಮಾನ ಕೈಗೊಳ್ಳುವುದು ಅವಶ್ಯವಿರುತ್ತದೆ ಎಂದು ತಿಳಿಸಿದರು.

ಸ್ಕೂಲ್ ನಿರ್ದೇಶಕರಾದ ಪ್ರೊ. ಕಾಂಬ್ಳೆ ಅಶೋಕ್ ರವರು ಮಾತನಾಡಿ ಈ ಹಿಂದೆ ವಿಶ್ವವಿದ್ಯಾನಿಲಯದಲ್ಲಿ 10+2 ಬ್ರಿಡ್ಜ್‌ಕೋರ್ಸ್ ಅನ್ನು ಪ್ರಾರಂಭಿಸಿದ್ದು ಈ ಕೋರ್ಸ್‌ಗೆ ಸಂಬಂಧಪಟ್ಟ ಮಂಡಳಿಯಿಂದ ಹಾಗೂ ಸರ್ಕಾರದಿಂದ ಅನುಮೋದನೆ ಇಲ್ಲದ ಕಾರಣ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿರುವುದಾಗಿ ತಿಳಿಸುತ್ತಾ, ಪ್ರಸ್ತುತ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ರವರು ಸಲ್ಲಿಸಿರುವ ಮನವಿಯನ್ನು ಪರಿಗಣಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಮಂಡಳಿ ಹಾಗೂ ಸರ್ಕಾರದೊಂದಿಗೆ ಪತ್ರವ್ಯವಹಾರ ನಡೆಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಲಸಚಿವರು                                                    ಕುಲಪತಿಗಳು

ಡಾ. ರಮಾನಂದ ಎಂ.ಎಸ್, ವಾಣಿಜ್ಯ ನಿಕಾಯ ರವರು ಮಾತನಾಡಿ ಪ್ರೊ. ಕಾಂಬ್ಳೆ ಅಶೋಕ್ ರವರು ಹೇಳಿದಂತೆ ಈ ಹಿಂದೆ ನಡೆಸಿದ ಬ್ರಿಡ್ಜ್‌ಕೋರ್ಸ್‌ಗೆ ಸಂಬಂಧಪಟ್ಟ ಮಂಡಳಿಯಿಂದ ಹಾಗೂ ಸರ್ಕಾರದಿಂದ ಅನುಮೋದನೆ ಪಡೆಯದ ಕಾರಣ ಸಮಸ್ಯೆಯಾಗಿರುತ್ತದೆ, ಆದರೆ ಪ್ರಸ್ತುತ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ರವರ ಪತ್ರದಲ್ಲೂ ಸಹ ಈ ಪ್ರವೇಶಾತಿ ನೀಡುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ ಮತ್ತು ಇತರೆ ವಿಶ್ವವಿದ್ಯಾನಿಲಯಗಳಲ್ಲೂ ಸಹ ಮುಕ್ತ ಶಾಲೆಯಲ್ಲಿನ 10 + 2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುತ್ತಿರುವ ಹಿನ್ನೆಲೆಯಲ್ಲಿ ನಾವು ಪರಿಗಣಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಹಣಕಾಸು ಅಧಿಕಾರಿಗಳಾದ ಡಾ. ಖಾದರ್ ಪಾಷ ರವರು ಮಾತನಾಡಿ ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಗಳ ದಿನಾಂಕ: 28.11.2022ರ ಪತ್ರದ ಅಂತಿಮ ಪ್ಯಾರದಲ್ಲಿ ತಿಳಿಸಿರುವಂತೆ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರ ಪತ್ರ ದಿನಾಂಕ: 25.11.2021 ರಲ್ಲಿನ ಮೂರು ಷರತ್ತುಗಳಂತೆ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವಿಶೇಷ ಆಹ್ವಾನಿತರು ಹಾಗೂ ನಿರ್ದೇಶಕರು, CIQA ರವರು ಮಾತನಾಡಿ UUCMS Portal ನಲ್ಲಿ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ಸಂಸ್ಥೆಯನ್ನು ಸಹ ಅಳವಡಿಸಲಾಗಿರುವುದರಿಂದ ನಮ್ಮ ವಿಶ್ವವಿದ್ಯಾನಿಲಯದಲ್ಲೂ ಸಹ ಪರಿಗಣಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ತೀರ್ಮಾನ :** ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ಸಂಸ್ಥೆಯ ಮುಕ್ತ ಶಾಲೆಯಲ್ಲಿನ 10 + 2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶಾತಿ ಕಲ್ಪಿಸಿಕೊಡಲು ಅನುಮೋದಿಸಿತು. ಮುಂದುವರೆದು, ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಅಧೀನ ಕಾರ್ಯದರ್ಶಿಗಳ ದಿನಾಂಕ: 28.11.2022ರ ಪತ್ರದ ಅಂತಿಮ ಪ್ಯಾರದಲ್ಲಿ ತಿಳಿಸಿರುವಂತೆ ಹಾಗೂ ವಿವಿ ನಿಲಯದ ಸುತ್ತೋಲೆ ದಿನಾಂಕ: 06.12.2021ರಲ್ಲಿನ ಮೂರು ಷರತ್ತುಗಳನ್ನು ನಮೂದಿಸುವುದು ಎಂದು ತೀರ್ಮಾನಿಸಲಾಯಿತು.

---

**ವಿಷಯ ಸಂಖ್ಯೆ: 29.02**

**ವಿಷಯ: 2023–24ನೇ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಸಂಬಂಧ ವಿವಿಧ ಶಿಕ್ಷಣ ಕ್ರಮಗಳ ವಿವರಣಾ ಪುಸ್ತಕಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಬಗೆಗೆ**

*****

2023–24ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಶಿಕ್ಷಣ ಕ್ರಮಗಳ ಪ್ರವೇಶಾತಿಗೆ ಯು.ಜಿ.ಸಿ. ವತಿಯಿಂದ ದಿನಾಂಕ: 16–06–2023 ಹಾಗೂ ಇಮೇಲ್ ದಿನಾಂಕ:31–07–2023 ರಂದು ಒಟ್ಟು 35 ಶಿಕ್ಷಣ ಕ್ರಮಗಳಿಗೆ ಅನುಮೋದನೆ ಪಡೆದು ಹಾಗೂ ವಿವಿಯ ಡಿಪ್ಲೋಮಾ, ಪಿ.ಜಿ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಾತಿ ಸಂಬಂಧ ಪ್ರತಿ

ಕುಲಸಚಿವರು　　　　　　　　　　　　　　ಕುಲಪತಿಗಳು

ವರ್ಷದಂತೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಯು.ಜಿ.ಸಿ. ನಿಗಧಿಪಡಿಸಿರುವ ಮಾನದಂಡಗಳಂತೆ ಪ್ರವೇಶಾತಿ ಅರ್ಹತೆ, ಪ್ರವೇಶಾತಿ ಶುಲ್ಕ, ಪ್ರವೇಶಾತಿ ಸಂಬಂಧ ವಿವಿಧ ದಿನಾಂಕ ಹಾಗೂ ಇತರೆ ಅವಶ್ಯ ಮಾಹಿತಿಯನ್ನೊಳನ್ನು ಸಿದ್ಧಪಡಿಸಿ ಆಯಾಯ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ವಿವರಣಾ ಪುಸ್ತಕ ಸಮಿತಿಯ ಅನುಮೋದನೆ ಪಡೆದು ಮಾನ್ಯ ಕುಲಪತಿಗಳ ನಿರ್ದೇಶನದಂತೆ, ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಯ ಒಟ್ಟು 19 ವಿವರಣಾ ಪುಸ್ತಕಗಳನ್ನು ಈ ಕೆಳಕಂಡಂತೆ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

| A. | Under graduate Programmes: | | |
|---|---|---|---|
| **Sl no** | **Name of the ODL Programmes** | **Duration** | **Scheme** |
| 1 | B.A | 3 years | Annual |
| 2 | B.Com | 3 years | Annual |
| 3 | B.LIB.I.Sc | 1 year | Semester |
| 4 | B.Sc - General | 3 years | Semester |
| 5 | B.Sc – Information Technology | 3 years | Semester |
| 6 | B.S.W- Bachelor of Social Work | 3 years | Semester |
| 7 | B.B.A | 3 years | Semester |
| 8 | B.C.A – Computer Applications | 3 years | Semester |
| **B.** | **Post-Graduate Programmes** | | |
| 1 | M.A – Kannada | 2 Years | Semester |
| 2 | M.A – English | 2 Years | Semester |
| 3 | M.A – Hindi | 2 Years | Semester |
| 4 | M.A – Telugu | 2 Years | Semester |
| 5 | MA-Urdu | 2 Years | Semester |
| 6 | MA-Sanskrit | 2 Years | Annual |
| 7 | M.A – History | 2 Years | Semester |
| 8 | M.A – Economics | 2 Years | Semester |
| 9 | M.A - Political Science | 2 Years | Semester |
| 10 | M.A - Public Administration | 2 Years | Semester |
| 11 | M.A – Sociology | 2 Years | Semester |
| 12 | M.A - Journalism and Mass Communication | 2 Years | Semester |
| 13 | M.A - Ancient History & Archeology | 2 Years | Semester |
| 14 | M.A - Education | 2 Years | Semester |
| 15 | M.Com | 2 Years | Semester |
| 16 | MBA | 2 Years | Semester |
| 17 | M.S.W – Master of Social Work | 2 Years | Semester |
| 18 | M.Sc. – Computer Science | 2 Years | Semester |
| 19 | M.Sc. – Data Science | 2 Years | Semester |
| 20 | MCA- Master of Computer Application | 2 Years | Semester |
| 21 | M.Sc. – Biochemistry | 2 Years | Semester |
| 22 | M.Sc. – Biotechnology | 2 Years | Semester |
| 23 | M.Sc. – Chemistry | 2 Years | Semester |

ಕುಲಸಚಿವರು

ಕುಲಪತಿಗಳು

| | | | |
|---|---|---|---|
| 24 | M.Sc. – Clinical Nutrition and Dietetics | 2 Years | Semester |
| 25 | M.Sc. – Environmental Science | 2 Years | Semester |
| 26 | M.Sc. – Geography | 2 Years | Semester |
| 27 | M.Sc. – Mathematics | 2 Years | Semester |
| 28 | M.Sc. – Microbiology | 2 Years | Semester |
| 29 | M.Sc. – Physics | 2 Years | Semester |
| 30 | M.Sc. – Psychology | 2 Years | Semester |
| 31 | M.Sc. – Information Technology | 2 Years | Semester |
| 32 | M.Lib.I.Sc | 1 Year | Semester |
| 33 | M.Sc - Botany | 2 Years | Semester |
| 34 | M.Sc - Zoology | 2 Years | Semester |
| 35 | M.Sc – Food & Nutrition Science | 2 Years | Semester |
| | **PG Certificate Programmes 1** | | |
| 1 | PG Certificate in English (PGCDE) | 1year | Annual |
| 2 | PG Certificate in Communicative English (PGCCE) | 1year | Annual |
| 3 | PG Certificate in Human Resource Management (PGCHRM) | 1year | Annual |
| 4 | PG Certificate in Financial Management (PGCFM) | 1year | Annual |
| 5 | PG Certificate in Business Administration (PGCBA) | 1year | Annual |
| 6 | PG Certificate in Marketing Management (PGCMM) | 1year | Annual |
| 7 | PG Certificate in Nutrition and Dietetics (PGCND) | 1year | Annual |
| 8 | PG Certificate in Journalism and Mass Communication (PGCJMC) | 1year | Annual |
| 9 | PG Certificate in Kuvempu Sahithya (PGCKS) | 1year | Annual |
| 10 | PG Certificate in Business Law (PGCBL) | 1year | Annual |
| 11 | PG Certificate in Information Technology (PGCIT) | 1year | Annual |
| 12 | PG Certificate in Computer Application (PGCCA) | 1 year | Annual |
| 13 | PG Certificate Courses in Ambedkar Studies (PGCAS) | 1 year | Annual |
| | **Diploma Programmes** | | |
| 01 | Diploma in Kannada (DIK) | 1 year | Annual |
| 02 | Diploma in Journalism (DIJ) | 1 year | Annual |
| 03 | Diploma in Nutrition and Health Education (DNHE) | 1 year | Annual |
| 04 | Diploma in Information Technology (DIT) | 1 year | Annual |
| 05 | Diploma in Computer Application (DCA) | 1 year | Annual |
| 06 | Diploma in Early Childhood Care and Education (DCCE) | 1 Year | Annual |
| | **Under Graduate Certificate Programmes** | | |
| 01 | Under Graduate Certificate in Panchayath Raj (UGCPR) | 6 months | Half yearly |
| 02 | Under Graduate Certificate in Nutrition and Food (UGCNF) | 6 months | Half yearly |
| 03 | Under Graduate Certificate Programme in Information Communication Technology (UGCICT) | 6 months | Half yearly |

ಈ ಮೇಲಿನ ಶಿಕ್ಷಣ ಕ್ರಮಗಳ ವಿವರಣಾ ಪುಸ್ತಕಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಕ್ರಮಕ್ಕೆ ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ : **2023–24ನೇ** ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಸಂಬಂಧ ವಿವಿಧ ಶಿಕ್ಷಣ ಕ್ರಮಗಳ ವಿವರಣಾ ಪುಸ್ತಕಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಕ್ರಮಕ್ಕೆ ಅನುಸಮರ್ಥಿಸಿ ಅನುಮೋದಿಸಲಾಯಿತು.

---

ಕುಲಸಚಿವರು　　　　　　　　　　ಕುಲಪತಿಗಳು

**ವಿಷಯ ಸಂಖ್ಯೆ: 29.03**

**ವಿಷಯ: ಕರಾಮುವಿ ನಿಲಯದಲ್ಲಿ 2001–02 ರಿಂದ 2012–13 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ/ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಂತಿಮ ಅವಕಾಶ ಮಾಡಿಕೊಡುವ ಬಗೆಗೆ**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2001–02 ರಿಂದ 2012–13 ರವರೆಗೆ ವಿವಿಧ ಸ್ನಾತಕ/ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಪರೀಕ್ಷೆ ತೆಗೆದುಕೊಂಡಿಲ್ಲದ ಹಾಗೂ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ 2020–2021ನೇ ಹಾಗು 2021–2022 ನೇ ಸಾಲುಗಳಲ್ಲಿ ವಿದ್ಯಾರ್ಥಿಗಳ ಮನವಿ ಮೇರೆಗೆ ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನ ಮಂಡಳಿಯ ಅನುಮೋದನೆ ಪಡೆದು ಎರಡು ಬಾರಿ ಪರೀಕ್ಷೆಗಳನ್ನು ಬರೆಯಲು ಅವಕಾಶವನ್ನು ನೀಡಲಾಗಿರುತ್ತದೆ.

2001–02 ರಿಂದ 2012–13ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದು ಒಂದು ಮತ್ತು ಎರಡು ವಿಷಯಗಳಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳು ಅಂತಿಮ ಅವಕಾಶ ನೀಡುವಂತೆ ಮನವಿ ಪತ್ರಗಳನ್ನು ಸಲ್ಲಿಸಿ ಕೋವಿಡ್–19 ಸಾಂಕ್ರಾಮಿಕ ರೋಗ, ಅತಿವೃಷ್ಠಿಯಿಂದಾದ ಪ್ರಕೃತಿ ವಿಕೋಪ ಹಾಗೂ ಇನ್ನಿತರ ಸಮಸ್ಯೆಗಳಿಂದ ಹಿಂದಿನ ಸಾಲುಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಸಾದ್ಯವಾಗದ ಹಿನ್ನೆಲೆಯಲ್ಲಿ 2023–24ನೇ ಸಾಲಿನಲ್ಲಿ ನಡೆಯುವ ಪರೀಕ್ಷೆಯ ಸಮಯದಲ್ಲಿ ಪೂರಕ ಪರೀಕ್ಷೆಯನ್ನು ಬರೆಯಲು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವ ವಿಷಯವನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲಾಗಿದ್ದು ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಮುಂದೆ ನಡೆಯುವ ಶೈಕ್ಷಣಿಕ ಮಂಡಳಿ ಸಭೆ ಹಾಗೂ ವ್ಯವಸ್ಥಾಪನ ಮಂಡಳಿ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆದು ಕ್ರಮವಹಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಕರಾಮುವಿ ನಿಲಯದಲ್ಲಿ 2001–02 ರಿಂದ 2012–13 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ/ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಂತಿಮ ಅವಕಾಶ ನೀಡುವ ಬಗ್ಗೆ ಅನುಮೋದಿಸಲಾಯಿತು.**

---

**ವಿಷಯ ಸಂಖ್ಯೆ: 29.04**

**ವಿಷಯ:** 2023 ರ ಜುಲೈ ಆವೃತ್ತಿಯಲ್ಲಿ ಕ.ರಾ.ಮು.ವಿ.ಯಲ್ಲಿ ಹೊಸದಾಗಿ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಬಗೆಗೆ.

*****

2023ನೇ ಸಾಲಿನ ಜುಲೈ ಆವೃತ್ತಿಯಲ್ಲಿ ಹೊಸದಾಗಿ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ 2020 ODL ನಿಯಮಗಳಂತೆ ಪ್ರಕಟಣೆ ಹೊರಡಿಸಲು, ದಿನಪತ್ರಿಕೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಣೆ/ಜಾಹೀರಾತನ್ನು ಹೊರಡಿಸಿದ್ದು **ಅನುಬಂಧ 'ಅ'** ನಲ್ಲಿ ಲಗತ್ತಿಸಿದೆ. ಈ ಸಂಬಂಧ ಅನುಸಮರ್ಥನೆಗಾಗಿ.

ಕುಲಸಚಿವರು ಕುಲಪತಿಗಳು

ಮುಂದುವರೆದು, 10 ಕಲಿಕಾರ್ಥಿ ಸಹಾಯ ಕೇಂದ್ರಗಳ ಸ್ಥಾಪನೆಯಲ್ಲಿ 01 ಕೇಂದ್ರವನ್ನು ಮೈಸೂರು ಕೇಂದ್ರ ಸ್ಥಾನದಲ್ಲಿ ಸ್ಥಾಪಿಸಿ ಉಳಿದ 09 ಕೇಂದ್ರಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸುವ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : 1. **2020 ODL** ನಿಯಮಗಳಂತೆ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಣೆ/ಜಾಹೀರಾತನ್ನು ಹೊರಡಿಸಿಡಿರುವ ಕ್ರಮಕ್ಕೆ ಅನುಸಮರ್ಥಿಸಲಾಯಿತು.

2. ವಿಭಾಗದ ಅಧ್ಯಾಪಕರು ಹಾಗೂ ವಿಶ್ವವಿದ್ಯಾನಿಲಯದಲ್ಲಿರುವ ಸೌಲಭ್ಯಗಳನ್ನು ಬಳಸಿಕೊಂಡು ಕೇಂದ್ರ ಕಛೇರಿಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸಲು ಅನುಮೋದಿಸಲಾಯಿತು.

---

**ವಿಷಯ ಸಂಖ್ಯೆ: 29.05**

ವಿಷಯ : ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ **"ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲಡೆ"** ಎಂಬುದನ್ನು ಪಸರಿಸುವ ಸಂಬಂಧ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಕೇಂದ್ರಗಳಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಈಗಾಗಲೇ ಕ್ರಮವಹಿಸಲಾಗಿದ್ದು, 145 ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. 2023ರ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ನಡೆಯುವ ಸಂದರ್ಭದಲ್ಲಿ ಹೊಸ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಅಧಿಸೂಚನೆ ಹೊರಡಿಸಲಾಗಿದ್ದು, ಅದರಂತೆ 2023ರ ಜನವರಿ ಆವೃತ್ತಿಯಲ್ಲಿ 31 ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

ಮುಂದುವರೆದು 2020-21, 2021-22ರ ಸಾಲುಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಬಯಸಿ ಬಂದ ಅರ್ಜಿಗಳಲ್ಲಿ ಕಡಿಮೆ ಶುಲ್ಕ ಪಾವತಿಸಿ ತಡೆಹಿಡಿಯಲಾಗಿದ್ದ ಅರ್ಜಿಗಳಲ್ಲಿ ಆಸಕ್ತ ಶಿಕ್ಷಣ ಸಂಸ್ಥೆಗಳಿಗೆ ಉಳಿಕೆ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದ 7 ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ನಿಯಮಾನುಸಾರ ಖುದ್ದು ಭೇಟಿ ನೀಡಿ ಮೂಲಸೌಕರ್ಯಗಳನ್ನು ಪರಿಶೀಲಿಸಿ ವರದಿ ಆಧಾರದ ಮೇಲೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನಾಗಿ ಸ್ಥಾಪಿಸಿ ಆದೇಶ ನೀಡಲಾಗಿತ್ತು, ಅದರ ವಿವರಗಳನ್ನು **'ಅನುಬಂಧ-ಅ'** ನಲ್ಲಿ ಒದಗಿಸಿದೆ, ಈ ಸಂಬಂಧ ಅನುಸಮರ್ಥನೆ ಕೋರಿದೆ.

ಕುಲಸಚಿವರು ಕುಲಪತಿಗಳು

2023–24 ರ ಜುಲೈ ಆವೃತ್ತಿಯಲ್ಲಿ ಹೊಸದಾಗಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಬಯಸಿ ಬಂದ 18 ಕಾಲೇಜು/ಶಿಕ್ಷಣ ಸಂಸ್ಥೆಗಳ ಅರ್ಜಿಗಳನ್ನು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ತಂದಿರುವ ವರದಿಯನ್ನು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಶಾಸನಬದ್ಧ ಅಧಿಕಾರಿಗಳ ಸಮಿತಿಯನ್ನು ರಚಿಸಿ, ಸಮಿತಿಯ ಶಿಫಾರಸ್ಸಿನಂತೆ ಆಡಳಿತಾತ್ಮಕ ಅನುಮೋದನೆ ಪಡೆದು ಅದರಂತೆ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧದ ವಿಷಯವನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** 1. **ವಿಶ್ವವಿದ್ಯಾನಿಲಯವು ನಿಗದಿಪಡಿಸುವ ಶುಲ್ಕ ಹಾಗೂ ಇತರೆ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸಂಬಂಧಪಟ್ಟ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪತ್ರ ಮುಖೇನ ತಿಳಿಸುವುದು.**

2. **ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಕ್ರಮಕ್ಕೆ ಅನುಸಮರ್ಥಿಸಿ ಅನುಮೋದಿಸಲಾಯಿತು.**

---

**ವಿಷಯ ಸಂಖ್ಯೆ: 29.06**

**ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ವಿಜ್ಞಾನ ಕಾರ್ಯಕ್ರಮಗಳ ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳನ್ನು ರಾಜ್ಯದ ಇತರೆ ಕೇಂದ್ರಗಳಲ್ಲಿ ನಡೆಸುವ ಬಗ್ಗೆ.**

**ಉಲ್ಲೇಖ: ದಿನಾಂಕ: 06–06–2023ರಂದು ನಡೆದ ವಿಜ್ಞಾನ ಕಾರ್ಯಕ್ರಮಗಳ ಸಮಿತಿ ಸಭೆಯ ನಡವಳಿ.**

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯ ವಾಕ್ಯದೊಂದಿಗೆ ಎಲ್ಲಾ ವರ್ಗದ ವಿದ್ಯಾರ್ಥಿಗಳ ಮನೆಯ ಬಾಗಿಲಿಗೆ ಶಿಕ್ಷಣವನ್ನು ನೀಡುವ ಸಲುವಾಗಿ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ವಿಜ್ಞಾನ ಕಾರ್ಯಕ್ರಮಗಳ ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳನ್ನು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ವಲಯ/ಜಿಲ್ಲಾ ಕೇಂದ್ರಗಳಲ್ಲಿ ನಡೆಸುವ ಸಂಬಂಧ ದಿನಾಂಕ: 06–06–2023ರಂದು ನಡೆದ ವಿಜ್ಞಾನ ಕಾರ್ಯಕ್ರಮಗಳ ಸಮಿತಿ ಸಭೆಯಲ್ಲಿ ಚರ್ಚಿಸಿ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಆಂತರಿಕ/ಬಾಹ್ಯ ಅಧ್ಯಾಪಕರುಗಳಿಗೆ ಸಂಭಾವನೆ ಮತ್ತು ಭತ್ಯೆಗಳನ್ನು ಹಾಗೂ ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳನ್ನು ನಡೆಸಲು ಸ್ಥಳಾವಕಾಶ ಮಾಡಿಕೊಡುವ ಕೇಂದ್ರಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರಯೋಗಾಲಯ ಶುಲ್ಕ ಮತ್ತು ಕೆಮಿಕಲ್ ಶುಲ್ಕ ಇತ್ಯಾದಿ ಅಂಶಗಳ ಬಗ್ಗೆ ಚರ್ಚಿಸಿ

ಕುಲಸಚಿವರು

ಕುಲಪತಿಗಳು

ಸಂಭಾವನೆಯನ್ನು ನಿಗದಿಪಡಿಸಿ ಸದರಿ ವಿಷಯವನ್ನು ಯಥಾವತ್ತಾಗಿ ಶೈಕ್ಷಣಿಕ ಮಂಡಳಿಯಲ್ಲಿ ಮಂಡಿಸಿ ಅಲ್ಲಿನ ಶಿಫಾರಸ್ಸಿನಂತೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಮೇರೆಗೆ ಪ್ರಾಯೋಗಿಕ ತರಗತಿಗಳನ್ನು ನಡೆಸಲು ಕೇಂದ್ರಗಳನ್ನು ಗುರುತಿಸಬಹುದಾಗಿದೆ ಎಂದು ಶಿಫಾರಸ್ಸು ಮಾಡಲಾಗಿದೆ. ಈ ಸಂಬಂಧ ನೀತಿ ನಿಬಂಧನೆಗಳನ್ನು ರೂಪಿಸಿಕೊಳ್ಳುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲು ಶೈಕ್ಷಣಿಕ ಮಂಡಳಿಯ ಸಭೆಗೆ ವಿಷಯ ಮಂಡಿಸಲಾಗಿದೆ.

**ತೀರ್ಮಾನ: ಸ್ನಾತಕ ಮತ್ತು ಸ್ನಾತಕೋತ್ತರ ವಿಜ್ಞಾನ ಕಾರ್ಯಕ್ರಮಗಳ ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳನ್ನು ರಾಜ್ಯದ ಇತರೆ ಕೇಂದ್ರಗಳಲ್ಲಿ ನಡೆಸಲು ಉದ್ದೇಶಿಸಿರುವ ಕ್ರಮವು ಸೂಕ್ತವಾಗಿದ್ದು ಪ್ರತಿ ಕೇಂದ್ರಕ್ಕೆ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗಧಿಪಡಿಸಿ ಇದರ ಆಧಾರದ ಮೇಲೆ ಶುಲ್ಕವನ್ನು ನಿಗದಿಪಡಿಸುವಂತೆ ತೀರ್ಮಾನಿಸಲಾಯಿತು.**

---

**ವಿಷಯ ಸಂಖ್ಯೆ: 29.07**

**ವಿಷಯ: ಕರಾಮುವಿಯಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಆನ್‌ಲೈನ್ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸುವ ಕುರಿತು.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ಎ+ ಮಾನ್ಯತೆ ದೊರೆತಿರುವ ಹಿನ್ನೆಲೆಯಲ್ಲಿ ಆನ್‌ಲೈನ್ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಯುಜಿಸಿಗೆ ವಿವಿಯಿಂದ ನಿಯಮಾನುಸಾರ ಅರ್ಜಿಯನ್ನು ದಿನಾಂಕ: 28-06-2023ರಂದು ಸಲ್ಲಿಸಲಾಗಿತ್ತು. ಪ್ರಸ್ತುತ ಯುಜಿಸಿ Expert Committee ಯು 550ನೇ ಸಭೆ ನಡೆಸಿ ಜುಲೈ -ಆಗಸ್ಟ್ 2023ರ ನಂತರ ಆನ್‌ಲೈನ್ ಶಿಕ್ಷಣ ಕ್ರಮಗಳನ್ನು ನಡೆಸುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಜುಲೈ-2023 ರಂದು ಇಮೇಲ್ ಪತ್ರ ನೀಡಿ Observation & Recommendation ನೀಡಿರುವ ನಡಾವಳಿಯು ವಿಶ್ವವಿದ್ಯಾನಿಲಯಕ್ಕೆ ಬಂದಿರುತ್ತದೆ. ಸದರಿ ಇಮೇಲ್ ಪತ್ರದನುಗುಣವಾಗಿ ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಲು recommendation ಆಗಿರುವುದನ್ನು ಮಾನ್ಯ ಶೈಕ್ಷಣಿಕ ಮಂಡಳಿಯ ಗಮನಕ್ಕೆ ತರಲಾಗಿದೆ.

1. Bachelor of Arts -General (Combinations of History, Economics & Political Science).
2. Bachelor of Commerce.
3. Master of Science Mathematics
4. Master of Arts in Economics
5. Master of Arts in Sanskrit
6. Master of Arts in Hindi

ಕುಲಸಚಿವರು

ಕುಲಪತಿಗಳು

7. Master of Arts in English
8. Master of Arts in Kannada
9. Master of Business Administration
10. Master of Commerce

Expert Committee ಯ ನಡಾವಳಿ ಹಾಗೂ ಇಮೇಲ್ ಪತ್ರವನ್ನು ಅಡಕಗೊಳಿಸಲಾಗಿದೆ.

ಸದರಿ ಪ್ರಸ್ತಾವನೆಗಳನ್ನು ಅವಗಾಹನೆಗೆ ತರುತ್ತಾ ವಿಶ್ವವಿದ್ಯಾನಿಲಯದಲ್ಲಿ 2023–24ರ ಜುಲೈ – ಆಗಸ್ಟ್ ಆವೃತ್ತಿಯಿಂದ ಮೇಲ್ಕಂಡ ಆನ್‌ಲೈನ್ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸಲು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಿದೆ.

**ತೀರ್ಮಾನ: ಕರಾಮುವಿಯಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಆನ್‌ಲೈನ್ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸುವ ಬಗ್ಗೆ ಅನುಮೋದಿಸಲಾಯಿತು.**

---

ಅಂತಿಮವಾಗಿ 29ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಡೀನ್ (ಶೈಕ್ಷಣಿಕ) ರವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು